ಈ ಬಗ್ಗೆ ಏನಾದರು ಸರ್ವೆ ಮಾಡಿಸಿದ್ದೀರಾ ? ಸರ್ವೆ ಮಾಡಿಸಿದ್ದರೆ ನಮ್ಮ ಹೊಸನಗರ ತಾಲ್ಲೂಕ್‌ನ್ನು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದಿದ್ದರೂ ಸಹ ತಾವು ಮುಂದವರೆದ ತಾಲ್ಲೂಕ್ ಎಂದು ಪರಿಗಣಿಸಲು ಆಧಾರ ಏನಿದೆ ಎಂಬುದಕ್ಕೆ ತಾವು ವಿವರಣೆ ಕೊಡಬೇಕು.

ಇನ್ನು ಕೈಗಾರಿಕೆಗಳವರು ರಾ-ಮೆಟೀರಿಯಲ್ಸ್ ಪಡೆಯಲು ಬಹಳ ಪ್ರರದಾಡುವಂತಹ ಸ್ಥಿತಿ ಬಂದಿದೆ, ಸುಲಭವಾಗಿ ಸಿಗುತ್ತಿಲ್ಲ. ಆವರು ರಾ ಮೆಟೀರಿಯಲ್ಸ್ ಪಡೆಯಲು ವಿಧಾನಸೌಧ ಸುತ್ತ ಬೇಕು. ಅಷ್ಟೇ ಅಲ್ಲ, ಪ್ರತಿಯೊಂದು ಕಡೆಗೂ ಹೋಗಿ ಪರದಾಡಬೇಕಾಗಿದೆ. ಈ ನೀತಿಯನ್ನು ತಾವು ಸಡಿಲಗೊಳಿಸಿ ಈಗಿ ಜಿಲ್ಲಾ ಮಟ್ಟದಲ್ಲಿ ಏನು ಕೈಗಾರಿಕಾ ಸಂಸ್ಥೆಗಳಿವೆ, ಅವುಗಳ ಮೂಲಕ ಕಾಲಕಾಲಕ್ಕೆ ಮತ್ತು ಸಮಯಕ್ಕೆ ಸರಿಯಾಗಿ ರಾ-ಮೆಟೀರಿಯಲ್ಸ್‌ನ್ನು ಒದಗಿಸುವುದರ ಮೂಲಕ ಈ ಕೈಗಾರಿಕೆಗಳ ನೆರವಿಗೆ ಬರುವುದರ ಮೂಲಕ ಒಂದು ಸುಂದರ ರಾಜ್ಯವನ್ನು ನಿರ್ಮಾಣ ಮಾಡಬೇಕೆಂದು ಹೇಳುತ್ತೇನೆ. ೧೯೮೦-೮೧ರಲ್ಲಿ ಕೈಗಾರಿಕಾ ಬೆಳವಣಿಗೆ ಹೇರಳವಾಗಿ ಆಗಿದೆ.

೩-೦೦ ಪಿ.ಎಂ.

ನಾನು ಸರ್ಕಾರವನ್ನು ಟೀಕೆ ಮಾಡಲಿಲ್ಲ, ಶ್ರೀ ರಾಮದೇವ್ ಅವರೇ ಏಕೆ ಈ ಕುಹಕ ನೀತಿ, ಬೇಡ. ೩ ಕೋಟಿ ರೂಪಾಯಿ ಉತ್ಪನ್ನ ಇರತಕ್ಕ ಸಂಪನ್ಮೂಲ ಇರತಕ್ಕಬಗ್ಗೆ ಏನು ಯೋಚನೆ ಮಾಡಿದ್ದೀರಿ ಅದಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಪಿ. ರಾಮದೇವ್.—ಮಾನ್ಯ ಉಪಾಧ್ಯಕ್ಷರು ಟೈಂ ಕೊಟ್ಟರೂ ಇವರು ಏಕೆ ಮೊಟಕು ಮಾಡುವುದಕ್ಕೆ ಹೋಗುತ್ತಿದ್ದಾರೆ,

ಶ್ರೀ ಐ.ಪಿ.ಡಿ. ಸಾಲಪ್ಪ.—ಮಾನ್ಯ ಚಂದ್ರಶೇಖರ್‌ರವರು ಈಲ್ಲಾಗಿಲ್ಲ, ಮಾನ್ಯ ರಾಂದೇವ್ ಅವರಿಗೆ ನಮ್ಮನ್ನು ಕಂಡ್ರೆ ಸ್ವಲ್ಪ ಅಸೂಯೆ ಎಂದು ಕಾಣುತ್ತದೆ, ನಾವು ವಿಶ್ರಾಂತಿಗಾಗಿದ್ದೇವೆ ಅದನ್ನು ಬೇರ್ಪಡಿಸುವುದಕ್ಕೆ ಹೊರಟಿದ್ದಾರೆ.

ಶ್ರೀ ಪಿ. ರಾಂದೇವ್.—ಮಾನ್ಯ ಚಂದ್ರಶೇಖರ್‌ರವರನ್ನು ಕಂಡರೆ ಬಹಳ ಅಭಿಮಾನ, ಏಕೆಂದರೆ, ಅವರು ಇದ್ದದ್ದನ್ನು ಇದ್ದಹಾಗೆ ಹೇಳುತ್ತಾರೆ, ಆದ್ದರಿಂದ ಅಭಿಮಾನ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ನನ್ನನ್ನು ಏನು ಹೊಗಳಿದರೂ ನಾನು ನಿಮ್ಮ ಕಡೆ ಬರುವವನಲ್ಲ. ಇಷ್ಟು ಮಾತನ್ನು ಹೇಳಿ, ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Re: Arrest of Women members of Legislature near Vidhana Soudha

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಒಂದು ಮಹತ್ವದ ವಿಚಾರವನ್ನು ಪ್ರಸ್ತಾಪಿಸಬೇಕಾಗಿದೆ. ಮಹಿಳೆಯರನ್ನು ಅರೆಸ್ಟ್ ಮಾಡಿರುವುದರ ಬಗ್ಗೆ ಹೇಳಬೇಕಾಗಿದೆ. ಇವತ್ತು ವಿರೋಧ ಪಕ್ಷದ ಮಹಿಳಾ ವಿಭಾಗದ ಸುಮಾರು ೨೦೦ ಜನ ಮಹಿಳೆಯರು ಗವರ್ನರ್‌ಗೆ ಮೆಮೊರ್ಯಾಂಡಂ ಕೊಡುವುದರ ಸಲುವಾಗಿ ಹೋಗಿದ್ದರು. ಅವರು ಹೋಗಿ ಮೆಮೊರ್ಯಾಂಡಂ ಕೊಟ್ಟು ವಾಪಸ್ ಬರುವಾಗ ವಿಧಾನ ಸೌಧದ ಹತ್ತಿರ ಅಂದರೆ, ಅದರಲ್ಲಿ ನಮ್ಮ ಶಾಸಕಿಯರಾದ ಶ್ರೀಮತಿ ಅನಸೂಯ ಗಜಾನನ ಶರ್ಮ ಅವರು ಇದ್ದರು, ಶ್ರೀಮತಿ ಪದ್ಮಾವತಿ ವಿಠಲರಾವ್ ಅವರೂ ಇದ್ದರು. ಆ ಮಹಿಳೆಯರು ವಿಧಾನ ಸಭೆಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳನ್ನು ನೋಡುವ ಸಲುವಾಗಿ ಇಲ್ಲಿ ಪಾಸ್ ತೆಗೆದುಕೊಳ್ಳಲಿಕ್ಕೆ ಬರುತ್ತಾಇದ್ದಾಗ ಪೋಲೀಸರು ಬಂದು ಮಹಿಳೆಯರನ್ನೆಲ್ಲಾ ಅರೆಸ್ಟ್‌ಮಾಡಿ ಕಬ್ಬನ್ ಪಾರ್ಕ್ ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿದ್ದಾರೆ.

SRI SHEERNALI S. M. CHANDRASHEKAR.—Sir, I am on a point of order.....

SRI S.R. BOMMAI.—I have raised an important issue. It pertains to the arrest of a Legislator. ಈ ರೀತಿ ಆತಂಕ ಮಾಡಿದರೆ ಮಾನ್ಯ ಶೀರ್ನಾಳಿ ಚಂದ್ರ ಶೇಖರ್ ಅವರಿಗೆ ಮಂತ್ರಿ ಪದವಿ ಸಿಕ್ಕುತ್ತದೆಯೇ ?

MR DEPUTY SPEAKER.—Please resume your seat. Now, we are discussing the demands. I do not think we can interrupt and bring some other subjects at this stage.

SRI S. R. BOMMAI.—Sir, this is a very important matter. The hon. Member Smt. Anasuya Gajanana Sharma wanted to participate in the.....

MR. DEPUTY SPEAKER.—You can raise it tomorrow I will give a chance tomorrow.

SRI S.R. BOMMAI.—Sir.....

MR DEPUTY SPEAKER.—I cannot permit you by overlooking the rules of this House. You convince me, how can I permit you ?

SRI P. RAMDEV.—Sir, on a point of order.....

SRI SHEERNALI S. M. CHANDRASHEKAR.—Sir, you have already given a ruling on it. How can there be a point of order now ? I would like to know from the hon. Member.....

SRI P. RAMDEV.—I want to know whether the hon. Member Sri Shreenali Chandrashekar has taken the powers of the Chair. When I have raised a point of order, how can he interrupt in the proceedings. The other day, when Sri Venkateshappa was assaulted by the police, did we not raise that subject and interrupt the discussion ?

SRI G.K. TAKKED.—This is not a point of order.

MR. DEPUTY SPEAEER.—I request the hon. Member Sri Takkad to resume his seat. I have not called him.

SRI G.K. TAKKED.—Sir, there is no point of order.

MR. DEPUTY SPEAKER.—I am here to give a ruling on it. I want the hon. Member Sri Bommai to show me under which rule we can interrupt this subject here ? You can bring it in some other form at an appropriate time when we can consider it. You have to give notice and it has to be brought in under some rule.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದು ನೋಟೀಸ್ ಕೊಟ್ಟು ತರತಕ್ಕ ವಿಚಾರವಲ್ಲ. ಒಬ್ಬ ಅಸೆಂಬ್ಲಿ ಸದಸ್ಯರು ಈ ಸಭೆಗೆ ಬರುವಾಗ ಪೋಲೀಸರು ಅರೆಸ್ಟ್ ಮಾಡಿ, ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ ಜಾಮೀನಿನ ಮೇಲೆ ಬಿಡತಕ್ಕಂಥ ಕೃತಿಯನ್ನು ನೋಡಿದಾಗ ನಮ್ಮ ಕರ್ತವ್ಯವನ್ನು ಮಾಡತಕ್ಕಂಥಾದ್ದಕ್ಕೆ ಹಕ್ಕುಚ್ಯುತಿ ಬಂದಿದೆ ಇವತ್ತು. ನಾನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಮಂಡಿಳಾ ಶಾಸಕರು ಬರುವಾಗ ಪೋಲೀಸರು ಬಂದು ಅವರ ಜೊತೆಗಾರರನ್ನೆಲ್ಲಾ ಅರೆಸ್ಟ್ ಮಾಡಿ ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ, ಕಬ್ಬನ್ ಪಾರ್ಕಿನಲ್ಲಿ ಕೂಡಿಸಿ, ಈ ಸಭೆಯ ಕಾರ್ಯ

ಕಲಾಪಗಳಲ್ಲಿ ಭಾಗವಹಿಸತಕ್ಕಂಥ ಒಬ್ಬ ಮಹಿಳಾ ಸದಸ್ಯರನ್ನು ಅಡ್ಡಿ ಮಾಡಿದ್ದಾರೆ. ಇದರ ಜೊತೆಗೆ, ಈಗಾಗಲೇ ಒಬ್ಬ ಮಂತ್ರಿ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದ ಬಗ್ಗೆ ಚಳುವಳಿ ನಡೆಯುತ್ತಾ ಇದೆ ರಾಜ್ಯದಲ್ಲಿ, ಅದರ ಬಗ್ಗೆ ಹೇಳುವುದಿಲ್ಲ. ಅದರ ಪ್ರತಿಭಟನೆಗಾಗಿ ರಾಜ್ಯಪಾಲರ ಹತ್ತಿರ ಹೋಗಿ ಮೆಮೊರಾಂಡಂ ಸಲ್ಲಿಸಿ, ವಿಧಾನಸಭೆಯಲ್ಲಿ ಏನು ಕಾರ್ಯಕಲಾಪಗಳು ನಡೆಯುತ್ತಾ ಇದೆ ಅದನ್ನು ನೋಡಬೇಕು, ಗ್ಯಾಲರಿಯಲ್ಲಿ ಕೂಡಬೇಕು ಎಂದು ಮಹಿಳೆಯರು ಬರುವಾಗ, ಸರ್ಕಾರದ ಪೋಲೀಸ್ ಅಧಿಕಾರಿಗಳು ಹಿಂದುಮುಂದು ಸೂಚನೆ ಕೊಡದೆ ಅವರನ್ನು ಬಂಧಿಸಿ ಪೋಲೀಸ್ ಸ್ಟೇಷನ್‌ನಲ್ಲಿಟ್ಟಿದ್ದಾರೆ, ಇದು ನ್ಯಾಯವೇ, ಸರ್ಕಾರದ ನೀತಿಯೇ, ಮಹಿಳೆಯರನ್ನು ಅಸಭ್ಯ ರೀತಿಯಿಂದ ನಡೆಸಿಕೊಳ್ಳತಕ್ಕಂಥಾದ್ದು, ಅರೆಸ್ಟ್ ಮಾಡತಕ್ಕಂಥಾದ್ದು, ಪೋಲೀಸ್ ಸ್ಟೇಷನ್‌ನಲ್ಲಿಡತಕ್ಕಂಥಾದ್ದು ಸರಿಯೇ, ಈ ಬಗ್ಗೆ ಸರ್ಕಾರ ಕೂಡಲೆ ಏನು ಕ್ರಮ ತೆಗೆದುಕೊಂಡಿದೆಯೋ ಗೊತ್ತಾಗಿಲ್ಲ, ಸರ್ಕಾರ ಕ್ರಮ ತೆಗೆದು ಕೊಳ್ಳಬೇಕು, ಇಲ್ಲದೇ ಹೋದರೆ ಅದಕ್ಕೆ ಪ್ರತಿಭಟನೆ ಮೂಲಕ ಏನು ಕಾರ್ಯಕ್ರಮ ತೆಗೆದುಕೊಳ್ಳ ಬೇಕೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಡಿ ದೇವೇಗೌಡ —ಅವರು ಅಸೆಂಬ್ಲಿ ಮೆಂಬರ್ ಇದ್ದಾರೆ. ಪಾರ್ಲಿಮೆಂಟರಿ ಮೆಂಬರ್ ಆಗಿದ್ದರೆ ಗೌರವವಾಗಿ ಮನೆಗೆ ಕರೆದುಕೊಂಡು ಹೋಗಿ ಕಳಿಸಿಬಿಡುತ್ತಿದ್ದರು. ಪಾಪ, ಅವರು ಅಸೆಂಬ್ಲಿ ಮೆಂಬರ್. ಆದಕಾರಣ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು, ಅಷ್ಟೇ ವ್ಯತ್ಯಾಸ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಹೇಳಿತ್ತೇನೆ.

ಶ್ರೀ ವೈ. ರಾಮಕೃಷ್ಣ.—ಸ್ವಲ್ಪ ಇರಿ, ಅವರು ಹೇಳುವುದಕ್ಕೆ ಮುಂಚೆ ನಾನು ಹೇಳುತ್ತೇನೆ.

(Interruption)

ಶ್ರೀ ವೈ. ರಾಮಕೃಷ್ಣ.—ಅವರು ಹೇಳಬಾರದು ಎಂದು ನಾನು ಹೇಳುತ್ತಾ ಇಲ್ಲ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಏನು ನಡೆಯಿತು ಎಂದು ಗೊತ್ತಾಗಬೇಡವೆ, ನಾನು ಒಂದು ನಿಮಿಷ ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಅವರು ಏನು ಹೇಳುತ್ತಾರೋ ಕೇಳಿ, ಆಮೇಲೆ ಉತ್ತರ ಕೊಡಿ.

MR. DEPUTY SPEAKER.—I am also equally eager to hear you, but, under what rules I can permit you to raise it ?

(Interruption)

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಈ ಸಭೆಗೆ ಅಧ್ಯಕ್ಷತೆ ವಹಿಸಲು ಬರುವಾಗ ಪೋಲೀಸರು ಅರೆಸ್ಟ್ ಮಾಡಿಕೊಂಡು ಹೋದರೆ ಯಾವ ರೂಲ್ ಕೆಳಗೆ ನಾವು ಎತ್ತಬೇಕು.

ಶ್ರೀ ವೈ. ರಾಮಕೃಷ್ಣ.—ಈಗ ನಡೆಯುತ್ತಾ ಇರತಕ್ಕಂಥಾದ್ದು ಬೇಡಿಕೆ ಮೇಲೆ ಚರ್ಚೆ. ಮಾನ್ಯ ಬೊಮ್ಮಾಯಿಯವರು ಹಿರಿಯ ಸಭಾ ಸದಸ್ಯರು, ವಿರೋಧಪಕ್ಷದ ನಾಯಕರಾಗಿ ಅವರು ಕೆಲಸ ಮಾಡಿದ್ದಾರೆ. ನಾವು ಯಾವ ಒಂದು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು ಎನ್ನುವುದನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಹೊರಗಡೆ ಒಂದು ಪ್ರಸಂಗ ನಡೆಯಿತು ಎಂದು ಹೇಳಿ, ತಮ್ಮ ಪರ್ಮಿಷನ್ ತೆಗೆದು ಕೊಳ್ಳದೆ ತಪ್ಪುಗೂ ತಿಳಿಸದೆ, ಸರ್ಕಾರಕ್ಕೂ ವಿಚಾರ ತಿಳಿಸದೆ ಹಾಗೇನೇ ಸಡನ್ನಾಗಿ ಯಾವುದೋ ಒಂದು ವಿಚಾರವನ್ನು ಎತ್ತಿಬಿಟ್ಟು ತಕ್ಷಣವೇ ನಮಗೆ ಉತ್ತರ ಕೊಡಿ ಅಂದರೆ ಹೇಗೆ ಆಗುತ್ತದೆ ? ವಿಷಯ ಮಹತ್ವರವಾಗಿರಬಹುದು, ಎತ್ತಬಾರದು ಎಂದು ನಾನು ಹೇಳುತ್ತಾ ಇಲ್ಲ.

ಶ್ರೀ ಎಂ.ವಿ. ರಾಜಶೇಖರನ್.—ಅವರನ್ನು ಇದ್ದಕ್ಕಿದ್ದಹಾಗೆ ಹಿಡಿದಿದ್ದಾರಲ್ಲ ಅವರಿಗೆ ಮೊದಲು ನೋಟೀಸ್ ಕೊಟ್ಟಿದ್ದರೆ ? ಅವರನ್ನು ನೋಟೀಸ್ ಕೊಡದೇ ಹಿಡಿದಿದ್ದರಿಂದ ತಾನೇ ಇಲ್ಲಿ ಆ ವಿಷಯ ವನ್ನು ಎತ್ತುತ್ತಾ ಇರುವುದು.

ಶ್ರೀ ಪೈ. ರಾಮಕೃಷ್ಣ.—ನಾನು ಆ ವಿಚಾರದ ಬಗ್ಗೆ ಮಾತನಾಡಬಾರದು ಎಂದು ಹೇಳುತ್ತಾ ಇಲ್ಲ. ಪ್ರಸ್ತುತವಾದ ವಿಷಯ ಇರಬಹುದು. ಆದರೆ ಮಾತನಾಡುವುದಕ್ಕೆ ಮುಂಚೆ ತಮ್ಮನ್ನು ಕೇಳಿ, ತಮ್ಮ ಪರ್ಮಿಷನ್ ತೆಗೆದುಕೊಂಡು ಮತ್ತು ನಮಗೂ ಬೇಳೆ ಪ್ರಸ್ತಾಪ ಮಾಡಬೇಕಾಗಿತ್ತು. ಏಕೆಂದರೆ, ಕೇಳಿದ ತಕ್ಷಣ ಹೇಳುವುದಕ್ಕೆ ಉತ್ತರ ಬೇಕಲ್ಲ. ಉತ್ತರ ಇದ್ದರೆ ತಾನೇ ಹೇಳಬೇಕಾದರೆ. ಆದುದರಿಂದ ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳುತ್ತೇನೆ. ವಿಷಯ ಬೃಹತ್ತರವಾಗಿರಬಹುದು, ಮಾನ್ಯ ಸದಸ್ಯರ ಮೇಲೆ ಕೈ ಮಾಡಿರತಕ್ಕಂಥಾ ವಿಷಯವಾಗಲಿ, ಅವರಿಗೆ ಎಷ್ಟು ಕುತೂಹಲವಿದೆಯೋ ನಮಗೂ ಅಷ್ಟೇ ಕುತೂಹಲ ಇರಬೇಕು. ಉತ್ತರವನ್ನು ಹೇಳುವುದಕ್ಕೆ ಟೈಮಾದರೂ ಬೇಕು ತಾನೇ.

ಶ್ರೀ ಪಿ. ರಾಮದೇವ್.—ವಿಧಾನ ಸೌಧದ ಮುಂದೆಯೇ ಅವರನ್ನು ಹಿಡಿದಿದ್ದಾರೆ.

ಶ್ರೀ ಪೈ. ರಾಮಕೃಷ್ಣ.—ಅಧ್ಯಕ್ಷರೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ ನಾನು ಏನು ಹೇಳುತ್ತೇನೆಂಬುದನ್ನು ಕೇಳಿ ಆನಂತರ ಅವರು ಮಾತನಾಡಬೇಡ ಎಂದು ಯಾರು ಹೇಳುತ್ತಾರೆ. ಬೇಡಿಕೆ ಬಂದಾಗ.....

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಸಂಪೂರ್ಣವಾಗಿ ಕಾನೂನು ಮಂತ್ರಿಗಳವರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ ತಮ್ಮ ಅಪ್ಪಣೆ ಇಲ್ಲದೆ ಮಾತನಾಡುವುದಕ್ಕಾಗುವುದಿಲ್ಲ, ತಮ್ಮ ಅಪ್ಪಣೆಯನ್ನು ಪಡೆದುಕೊಂಡೇ ರೂಲ್ಸ್ ಪ್ರಕಾರ ಮಾತನಾಡಬೇಕು. ಆದರೆ ಒಬ್ಬ ಶಾಸಕ ತನ್ನ ಕರ್ತವ್ಯ ನಿರ್ವಹಣೆಗಾಗಿ ಇವತ್ತು ಈ ಮನೆಯಲ್ಲಿ ನಡೆಯತಕ್ಕಂಥ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಬರುತ್ತಿರುವಾಗ ವಿಧಾನಸೌಧದ ಹತ್ತಿರವೇ ಅವರನ್ನು ಹಿಡಿದು ಅರೆಸ್ಟ್ ಮಾಡಿದ್ದಾರೆ. ಇದ್ದಕ್ಕಿದ್ದ ಹಾಗೆ ಒಬ್ಬ ಮಹಿಳಾ ಶಾಸಕಿಯನ್ನು ಪೋಲೀಸಿನವರು ಅರೆಸ್ಟ್ ಮಾಡಿಕೊಂಡು ಹೋಗಿ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅಲ್ಲಿ ಅವರನ್ನು ಕೂರಿಸಿ ಆನಂತರ ಜಾಮೀನಿನ ಮೇಲೆ ಬಿಡತಕ್ಕ ಕೃತಿಯನ್ನು ಮಾಡಿದ್ದಾರೆ. ಅವರು ಈ ವಿಷಯದ ಬಗ್ಗೆ ಯಾವಾಗ ನೋಟೀಸ್ ಕೊಡಬೇಕು, ಯಾವಾಗ ಈ ವಿಷಯವನ್ನು ಎತ್ತಬೇಕೆಂದು ನಾನು ಕಾನೂನು ಮಂತ್ರಿಗಳವರಲ್ಲಿ ಕೇಳುತ್ತೇನೆ. ಆದುದರಿಂದ ಅವರು ಏನು ಹೇಳುತ್ತಾರೆಂಬುದನ್ನು ಕೇಳಿ ನಂತರವೇ ಸರ್ಕಾರ ಉತ್ತರ ಕೊಡಲಿ.

SRI H.D. DEVEGOWDA.—In this connection, I compliment to-day the Hon. Minister for Law and Parliamentary Affairs for having tried to protect the interest of the proceedings and to maintain the dignity and decorum of this House.

ಶ್ರೀ ಎಸ್.ಆರ್. ಬೊಮ್ಮಾಯಿ.—ಇವತ್ತು ಆ ಮಹಿಳಾ ಶಾಸಕಿಯವರು ಬಂದಿದ್ದಾರೆ, ಅವರು ಏನು ಹೇಳುತ್ತಾರೋ ಅದನ್ನು ಕೇಳಿಕೊಂಡು ಆನಂತರ ಬೇಕಾದರೆ ಸರ್ಕಾರ ಒಂದು ಅರ್ಧ ಗಂಟೆ ಟೈಮ್ ತೆಗೆದುಕೊಂಡು ಬೇಕಾದರೆ ಉತ್ತರ ಕೊಡಲಿ. ಇವತ್ತು ಏನು ಘಟನೆ ನಡೆದಿದೆ ಎನ್ನುವುದನ್ನು ಅವರು ಈ ಸದನಕ್ಕೆ ತಿಳಿಸಬೇಕು.

MR. DEPUTY SPEAKER.—Can we discuss this matter without notice ?

SRI S.R. BOMMAI.—Yes, it can be discussed without notice.

MR. DEPUTY SPEAKER.—When we are discussing the Demands for Grants, how can this matter be taken up in between ? Kindly bring it in some other form.

ಶ್ರೀ ಎಸ್.ಆರ್. ಬೊಮ್ಮಾಯಿ.—Not necessary. ದಯವಿಟ್ಟು ಕೇಳಿ ತಮಗೆ ಉದಾಹರಣೆ ಬೇಕೇ? ಪಾರ್ಲಿಮೆಂಟಿನ ಸದಸ್ಯರಿಗೊಬ್ಬರಿಗೆ ಹೊಡೆದಂಥ ಪ್ರಸಂಗದಲ್ಲಿ ಅವರು ಹಾಗೆಯೇ ಹೋಗಿ ಆ ವಿಷಯವನ್ನು ಅಲ್ಲಿ ಪ್ರಸ್ತಾಪ ಮಾಡಿದ್ದರು. ಆ ತರಹ ಹಲವಾರು ಘಟನೆಗಳು ನಡೆದಿರತಕ್ಕದ್ದನ್ನು ತಮಗೆ ಬೇಕಾದರೆ ಕೋಟ್ ಮಾಡಿ ಹೇಳಬಲ್ಲೆ. ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಸದಸ್ಯರ ಹಕ್ಕು ಚ್ಯುತಿಗೆ ಬಂದಾಗ ತಾವು ರಕ್ಷಣೆಗೆ ಬರಬೇಕಾಗುತ್ತದೆ.

SRI Y. RAMAKRISHNA.—I would like to quote Rule 184. It reads thus :

> "When a member is arrested on a criminal charge or for a criminal offence or is sentenced to imprisonment by a court or is detained under an executive order, the committing judge, magistrate or executive authority, as the case may be shall immediately intimate such fact to the Speaker indicating the reasons for the arrest, detention or conviction, as the case may be, as also the place of detention or imprison ment of the member in the appropriate form set out in Schedule II."

(INTERRUPTIONS)

SRI Y. RAMAKRISHNA.—I am just reading the procedure.

MR. DEPUTY SPEAKER.—He is simply pointing out the rule.

SRI S.R. BOMMAI.—Let the Chair permit us first to raise the issue and then he can quote the rule. Now, I am quoting rule 325 which reads thus:

> "All matters not specifically provided for in these rules and all questions relating to the detailed working to these rules shall be regulated in such manner as the Speaker may from time to time direct."

Here, even if there is no provision in the rules and if the circumstance demands, the Chair has got residuary powers to permit any Member of this House to raise the issue A lady in Member of this House who was on her way to attend the Session was arrested by the Police and taken to the Police Station. It is a serious matter and there is breach of privilege of a Member and this House as well. The Chair has to come forward to protect us. Are we barred from raising such serious matters? Is a lady Member has no right to speak in this House? It will he strange, if the Chair does not permit us to raise such a serious issue. Perhaps, the Chair will be committing a grave mistake in not protecting the rights and privileges of the Members of this House, I woud only appeal to the Chair to permit the hon. Member Smt Anasuya Gajanan Sharma to explain under what circumstances she was prevented from attending this House.

MR. DEPUTY SPEAKER.—I will certainly protect the rights and privileges of the hon. Members of this House. Now, the question is. when we are discussing demands for grants, can we stop the proceedings and take up this matter without notice? You kindly give a notice of Breach of Privillege. I will consider it.

SRI Y. RAMAKRISHNA.—Sir, Rule 325 will come into operation when there is no specific rule. Here specific rule is there.

MR. DEPUTY SPEAKER.—I have received the report from the Magistrate. The question is, can we adjourn the discussion and take up this issue?

SRI S.R. BOMMAI.—It is the duty of the Magistrate to intimate the Chair. He has done his duty. The Hon. Minister quoted the rule which defines the duty of the Court and not of this House or a Member of this House.

SRI Y. RAMAKRISHNA.—It is mandatory for the Court.

MR. DEPUTY SPEAKER.— I will certainly try to protect the interests of the hon. Members of this House.

SRI S.R. BOMMAI.— I appeal to the Chair to allow the hon. Member Smt Anasuya Gajanan Sharma to state her case.

SRI M. VEERAPPA MOILY.—Sir, we are not preventing the hon. Members to raise the matter here. My only submission is, immediately after to-days discuision or immediately after the receipt of the detailed information, the hon. Members can raise the issue. As far as the privilege is concerned, it is known to everyone that privilege does not extend to criminal matters. It is mandatory for the Police to intimate to the Speaker and that has been done. There is absolutely no violation of any provisions prescribed by the rules of convention.

SRI S.R. BOMMAI.—We understand the rule. It is for the Court only. It is for the court to interfere...

SRI M. VEERAPPA MOILY.—We are also equally interested to protect the honour of the lady Member.

(INTERRUPTIONS)

SRI S.R. BOMMAI.—You are not at all interested. The attitude of the Government itself in not allowing the lady Member to make her statement shows that the Government is not interested in protecting the honour of the lady Member.

SRI M. VEERAPPA MOILY.—Let that subject be taken up with all seriousness at the appropriate time. We will provide some time for this issue and take up Raising it abruptely and losing the seriousness of the matter is no good.

SRI S.R. BOMMAI.—The incident occured abruptly and the lady Member was arrested by the Police. We have to take up this matter abruptly.

SRI M. VEERAPPA MOILY.—I do understand the concern of the hon'ble Member with all seriousness on this issue, He has raised the matter suddenly and he has brought it to the notice of the Chair. We have taken serious note of it. We will get a report and give an opportunity to the lady Member to make her Statement. We cannot just...

(INTERRUPTION)

SRI S.R. BOMMAI.-The Hon'ble Finance Minister is right. I agree with him. I am appealing to the Chair to permit the lady Member to make her statement. The Hon'ble Minister can reply afterwards.

SRI M.V. RAJASEHKARAN.--The affected lady Member must be given an opportunity to express her views Let us know as to what exactly has happenued.

MR. DEPUTY SPEAKER.—For the benefit of the Hon'ble Members of this House. I will read the information which I have received:

> "I have the honour to inform you that I have found it my duty in the exercise of my powers under Section 35 r/w 108 of the Karnataka Police Act to direct that Smt. Anasuya Gajanana Sharma Member of the Legislative Assembly by arrested/detained for under Section 35 r/w 109 of the Karnataka Police Act (Violation) (reasons for the arrest or detention as the case may be)
>
> Smt. Anasuya Gajanana Sharma Member, Legislative Assembly was accordingly arrested/taken into custody at 2-10 P.M. on 22-7-1981 and is at present lodged in the Cubbon park police Station.
>
> "B"
>
> I have the honour to inform you that Smt. Anasuya Gajanana Sharma, Member of the Legislative Assembly was released on bail at 2.30 P.M. on 22-7-1981 Court before me on a charge"

This is the information I have received. This is for the benefit of the House.

† ಶ್ರೀಮತಿ ಅನಸೂಯ ಗಜಾನನ ಶರ್ಮ (ಅಂಕೋಲ).—ಮಾನ್ಯ ಅಧ್ಯಕ್ಷರೇ, ಇವತ್ತು ಹೆಣ್ಣುಮಕ್ಕಳೆಲ್ಲ ವೆಂರವಣಿಗೆ ಹೋಗಿ ರಾಜ್ಯಪಾಲರಿಗೆ ಮನವಿಯನ್ನು ಸಲ್ಲಿಸಿ ಅನಂತರ ಸುಮಾರು ೩೦-೪೦ ಮಂದಿ ಹೆಂಗಸರು ವಿಧಾನ ಸೌಧಕ್ಕೆ ಬರಬೇಕೆಂದು ಬರುತ್ತಿರುವಾಗ ಪೋಲೀಸರು ಬಂದು

† Indicates that remarks or speeches have not been revised by the member conecerned.

ಎಲ್ಲಿ ಹೋಗುತ್ತಿದ್ದೀರಿ ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ, ನಾನು ವಿಧಾನ ಸಬೆಗೆ ಹೋಗುತ್ತಿದ್ದೇನೆ, ಪದ್ಮಾವತಿ ವಿಠಲರಾವ್‌ರವರು ಪರಿಷತ್ತಿಗೆ ಹೋಗುತ್ತಿದ್ದಾರೆ, ಮಿಕ್ಕವರೆಲ್ಲ ಇವತ್ತು ಕೌನ್ಸಿಲ್‌ನಲ್ಲಿ ಶ್ರೀ ಇಬ್ರಾಹಿಂರವರ ಪ್ರಕರಣ ಪ್ರಸ್ತಾಪವಾಗುವುದರಿಂದ ಅದನ್ನು ವೀಕ್ಷಿಸಲು ಹೋಗುತ್ತಿದ್ದಾರೆಂದು ಹೇಳಿವೆ. ಅಲ್ಲದೆ. ನಾವು ೫–೫ ಜನ ಬೇರೆ ಬೇರೆಯಾಗಿ ಹೋಗುತ್ತೇವೆಂದು ಕೂಡ ಹೇಳಿದೆ. ಆಗ ಪೋಲೀಸರು ನಮ್ಮನ್ನು ಬಿಡುವುದಿಲ್ಲವೆಂದು ನಮ್ಮನ್ನು ಮತ್ತು ಅವರನ್ನು ವ್ಯಾನಿಗೆ ತುಂಬಿದರು. ಇಲ್ಲಿ ಸಾಲುಸಾಲಾಗಿ ೫೦-೧೦೦ ಜನ ನಿಂತಿರುತ್ತಾರೆ. ಅಂಥ ಸಂದರ್ಭದಲ್ಲಿ ನಮ್ಮನ್ನು ಏಕೆ ಅರೆಸ್ಟ್ ಮಾಡಿದರು ಎಂದು ಕೇಳುತ್ತೇನೆ. ೩೦–೪೦ ಜನ ಹೆಂಗಸರನ್ನು ವ್ಯಾನಿನಲ್ಲಿ ತುಂಬಿಕೊಂಡು ಕಬ್ಬನ್ ಪಾರ್ಕ್ ಪೋಲೀಸ್ ಸ್ಟೇಷನ್ನಿಗೆ ಕರೆದುಕೋಡು ಹೋದರು. ಆಲ್ಲಿ ನಾನು ಅಸೆಂಬ್ಲಿಗೆ ಹೋಗ ಬೇಕಾಗಿದೆ, ಮಂಖ್ರಿ ಮಂತ್ರಿಗಳನ್ನು ನೋಡಬೇಕಾಗಿದೆ. ನಮ್ಮನ್ನು ಬಿಡುತ್ತೀರೋ ಇಲ್ಲವೋ ಎಂದು ಕೇಳಿದೆ. ಆಗ ನಮ್ಮಿಬ್ಬರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರು. ಉಳಿದ ಹೆಣ್ಣು ಮಕ್ಕಳನ್ನು ಬಿಡಲೇ ಇಲ್ಲ. ಆ ನಿರಪರಾಧಿ ಹೆಣ್ಣು ಮಕ್ಕಳಿಗೆ ವಿಸಿಟರ್ಸ್ ಗ್ಯಾಲರಿಗೆ ಬರುವುದಕ್ಕೆ ಅಧಿಕಾರ ಇದೆಯೇ ಇಲ್ಲವೇ ಎಂದು ಕೇಳುತ್ತೇನೆ. ಈ ರೀತಿ ಅರೆಸ್ಟ್ ಮಾಡುವುದಾದರೆ ಈ ಸದನ ಇರುವುದಾದರೂ ಏತಕ್ಕೆ ? ಈ ಸದನ ಇರುವುದು ರಾಜ್ಯದಲ್ಲಿ ಒಳ್ಳೆಯ ಶಿಸ್ತಿನ ವ್ಯವಸ್ಥೆ ಮಾಡಲಿಕ್ಕೆ ನಮ್ಮಂಥ ನಿರಪರಾಧಿಗಳನ್ನು ಅರೆಸ್ಟ್ ಮಾಡಿಕೊಂಡು ಹೋದರೆ ನಾವು ಇಲ್ಲಿ ಕುಳಿತು ಚರ್ಚೆ ಮಾಡುವುದಾದರೂ ಏನು ? ಆ ಚರ್ಚೆಯನ್ನು ತೆಗೆದುಕೊಂಡು ಮಾಡುವುದಾದರೂ ಏನು ? ನಮ್ಮ ಕೈಯಲ್ಲಿ ಕಲ್ಲು ಬಡಿಗೆಗಳು ಏನು ಇರಲಿಲ್ಲ, ಹೀಗಿದ್ದೂ ನಾವು ವಿಧಾನ ಸೌಧಕ್ಕೆ ಬರುತ್ತಿದ್ದಾಗ ನಮ್ಮನ್ನು ಅರೆಸ್ಟ್ ಮಾಡಿಕೊಂಡು ಹೋಗಲು ಕಾರಣವಾದರೂ ಏನು ಇತ್ತು ? ಆ ನಿರಪರಾಧಿ ಹೆಣ್ಣುಮಕ್ಕಳನ್ನು ಏತಕ್ಕೆ ಜೈಲಿನಲ್ಲಿ ಕೂರಿಸಿದ್ದೀರಿ ? ಹಾಗೆ ಕೂರಿಸಲಿಕ್ಕೆ ಏನು ಕಾರಣ ? ಆ ೩೦–೪೦ ಜನ ಹೆಣ್ಣುಮಕ್ಕಳು ಇಬ್ರಾಹಿಂ ವಿಷಯ ಪ್ರಸ್ತಾಪವನ್ನು ಕೇಳಲು ಕೌನ್ಸಿಲ್ಲಿಗೆ ಹೋಗಬೇಕೆಂದು ನನ್ನ ಜೊತೆಯಲ್ಲಿ ಬಂದರು. ಅವರ ಕೈಯಲ್ಲಿ ಕೂಡ ಕಲ್ಲು, ಬಡಿಗೆಗಳು ಏನು ಇರಲಿಲ್ಲ. ನಾವೇನು ಗದ್ದಲ ಮಾಡುವುದಿಲ್ಲ ವಿಧಾನ ಸೌಧಕ್ಕೆ ಹೋಗುತ್ತಿದ್ದೇವೆಂದು ಶ್ರೀಮತಿ ಪದ್ಮಾವತಿ ವಿಠಲರಾವ್‌ರವರು ಹೇಳಿದರು. ಆದರೂ ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋಗಲು ಕಾರಣವೇನು ? ಹೆಣ್ಣು ಮಕ್ಕಳು ಮರ್ಯಾದಸ್ಥರು ಈ ರಾಜ್ಯದಲ್ಲಿ ಇರಬೇಕೆ ಅಥವಾ ಎಲ್ಲಿಗಾದರೂ ಹೋಗಬೇಕೆ ಎಂಬ ಸಂಶಯ ಬರುತ್ತದೆ. ವಿನಾಕಾರಣ ನಮ್ಮನ್ನು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಜಾಮೀನಿನ ಮೇಲೆ ಬಿಡಲು ನಾವು ಏನು ಅಪರಾಧ ಮಾಡಿದ್ದೆವು ? ಕ್ರಿಮಿನಲ್ ತಪ್ಪನ್ನು ಏನಾದರೂ ಮಾಡಿದ್ದೇವೆಯೆ ? ಈ ವಿಷಯವನ್ನು ಈ ಸದನದಲ್ಲಿ ಎತ್ತುವುದು ಸರಿಯೇ ತಪ್ಪೇ ಎಂದು ಕೇಳುತ್ತಿದ್ದೇನೆ. ಇಂಥ ಮಹತ್ವದ ವಿಷಯವನ್ನು ಈ ಸದನದಲ್ಲಿ ಎತ್ತದಿದ್ದರೆ ಈ ಸದನ ಇರುವುದಾದರೂ ಏತಕ್ಕೆ ಎಂದು ಕೇಳುತ್ತೇನೆ. ಈ ವಿಷಯಕ್ಕೆ ೫ ನಿಮಿಷ ಷೇರ್ ಮಾಡಲಿಕ್ಕೆ.....

ಉಪಾಧ್ಯಕ್ಷರು.—ಷೇರ್ ಮಾಡಲಿಕ್ಕೆ ಏನು ಅಡ್ಡಿ ಇಲ್ಲ. I have made it clear. I have no objection to take up this question.

ಶ್ರೀಮತಿ ಅನಸೂಯ ಗಜಾನನ ಶರ್ಮ.—ನಾವು ಕೂಗಲಿಲ್ಲ ಏನು ಇಲ್ಲ.

ಶ್ರೀ ಮೈಬೇಲ್ ಬಿ. ಫರ್ನಾಂಡೀಸ್.—ನೀವು ಮಾಡಿದ ತಪ್ಪು ಏನೆಂದರೆ ಶ್ರೀಮತಿ ಇಂದಿರಾ ಗಾಂಧಿಯವರ ಬ್ಯಾಡ್ಜ್ ಹಾಕಿಕೊಂಡು ಬಂದಿದ್ದರೆ ಏನು ಆಗುತ್ತಿರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮ್ಮದೊಂದು ಭ್ರಾಂತಿ. I will read the report

"About 300 members of 'Mahila Samanvaya Samithi' came in a procession to Rajbhavan, violating the Prohibitory orders under Section 35 of the Karnataka Police Act, around Vidhana Soudha, during the currency of the State Legislature. They were advised to disperse. When they refused, 36 persons were arrested while the others went. Among the arrested there are legislators namely Smt. Anasuya Gajanana

Sharma and Smt. Padmavathy Vittala Rao. They were released at 2-30 P. M. on bail and the remaining 34 members are retained in the Cubbon Park Police Station''

On 20th June 1981, under Section 35 of the Karnataka Police Act 1963, the Prohibitory order has been promulgated here. The hon'ble lady Member Smt. Anasuya Gajanana Sharma looks to be good and innocent. She is a good legislator. She does not seem to be so innocent about law when she was leading a procession.

(INTERRUPTION)

3.30 P.M.

ಮಾನ್ಯ ಸದಸ್ಯರಾದ ಮೈಕೇಲ್ ಫರ್ನಾಂಡಿಸ್ ಅವರಿಗೆ ಪೋಲೀಸ್ ಆಕ್ಟ್ ಬೇಡ, ಐ.ಪಿ.ಸಿ. ಆಕ್ಟ್ ಬೇಡ, ಏನೂ ಬೇಡ ದೇಶದಲ್ಲಿ.

SRI MICHAEL B. FERNANDES.—How can you call it a procession ? They were coming back. There was no procession.

SRI M. VEERAPPA MOILY.—I know very well.

(INTERRUPTION)

SRI P. RAMDEV.—Please listen to us. After meeting the Governor, they dispersed. There was no procession.

SRI M. VEERAPPA MOILY.—It is not correct, Sir.

ಶ್ರೀಮತಿ ಅನಸೂಯ ಗಜಾನನ ಶರ್ಮ.—ನಾವು ಬರುತ್ತಿರುವಾಗ ಅವರು ನಮ್ಮ ಎದುರಿಗೆ ಬಂದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಪೋಲೀಸ್ ಆಕ್ಟ್ ಪ್ರಕಾರ ಪ್ರೊಹಿಬಿಟರಿ ಆರ್ಡರ್ ಇರುವಾಗ ರಾಜ್ಯದಲ್ಲಿ.....

SRI P. RAMDEV.—You are trying to mislead the House.

SRI M. VEERAPPA MOILY.—I am repeating the facts.

SRI P. RAMDEV.—But you are trying to mislead the House.

ಶ್ರೀ ಎಂ. ವೀರಪ್ಪ ಮೊಯಿಲಿ.—ವಿಧಾನಪರಿಷತ್ತು ಅಥವಾ ವಿಧಾನಸಭೆಯನ್ನು ನೋಡಬೇಕು ಎಂದು ಜನರು ಬಂದಿರಬಹುದು. ಆದರೆ ಹಾಗೆ ಗುಂಪುಗುಂಪಾಗಿ ಬರುವಾಗ ಆ ರೀತಿ ಬರಬಾರದು ಎಂದು ಎಚ್ ರಿಕೆ ಕೊಟ್ಟರೂ ಕಾನೂನನ್ನು ಮುರಿದಾಗ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಬೇರೆ ಕಾರಣ ಏನೂ ಇಲ್ಲ.

(ಗೊಂದಲ)

MR. DEPUTY SPEAKER.—The Hon. Minister has not yielded.

SRI P. RAMDEV.—You are trying.....

(INTERRUPTIONS)

SRI MICHAEL B. FERNANDES.—You are making even walking on the road impossible. Walking on the road has become an offence. ಕಳ್ಳಭಟ್ಟಿ ಸಾರಾಯಿ ತಯಾರು ಮಾಡಿದರೆ ಅದು ಕ್ರೈಮ್ ಆಗುವುದಿಲ್ಲ. ಆದರೆ ರಸ್ತೆಯಲ್ಲಿ ನಡೆಯುವುದು ಕ್ರೈಂ ಆಗಿದೆ.

ಶ್ರೀಮತಿ ಅನಸೂಯ ಜಿ. ಶರ್ಮ.—ಮಾನ್ಯ ಅರ್ಥಮಂತ್ರಿಗಳು ಹೇಳಿದ ಅರ್ಥದಲ್ಲಿ ನಾನು ಇನ್ಫ್ಲೂಯೆಂಟ್ ಅಲ್ಲ, ಎಂದು ಹೇಳುತ್ತಿದ್ದೀರಿ. ಆದರೆ ನಾವು ಇನ್ಫ್ಲೂಯೆಂಟ್. ನಾವು ರಾಜ್ಯಪಾಲರ ಬಳಿ ಮನವಿ ಕೊಡುವುದಕ್ಕೆ ೫೦೦ಕ್ಕಿಂತ ಜಾಸ್ತಿ ಜನ ಹೋಗಿದ್ದೆವು. ನಂತರ ರಾಜ್ಯಪಾಲರಿಗೆ ಮನವಿ ಕೊಟ್ಟು ವಾಪಸ್ ಬರುವಾಗ ಪೇಪರ್ ಓದುವಂಥ ೩೦-೪೦ ಹೆಣ್ಣುಮಕ್ಕಳು ವಿಧಾನಪರಿಷತ್ತಿನಲ್ಲಿ ಶ್ರೀ ಇಬ್ರಾಹಿಂ ಅವರ ವಿಷಯ ನಡೆಯುತ್ತಿದೆಯಂತೆ, ಆದ್ದರಿಂದ ನಾವು ಗ್ಯಾಲರಿಗೆ ಹೋಗಬೇಕು ಎಂದು ನಮ್ಮ ಜೊತೆ ಬಂದರು. ನಾವು ವಿಧಾನಸೌಧಕ್ಕೆ ಹೋಗುತ್ತೇವೆ ಎಂದು ಪೋಲೀಸರಿಗೆ ಹೇಳಿದಾಗ ಅವರು ೫ ಜನರು ಮಾತ್ರ ಹೋಗಬೇಕು ಎಂದು ಹೇಳಿದರು. ಹಾಗಾದರೆ ಇಷ್ಟು ಜನ ಪ್ರೇಕ್ಷಕರ ಗ್ಯಾಲರಿಗೆ ಏತಕ್ಕೆ ಬರುತ್ತಾರೆ ? ಹೇಗೆ ಬರುತ್ತಾರೆ ?

MR. DEPUTY SPEAKER.—When there were more than five persons in a group, they have committed an offence.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲನೆಯದಾಗಿ ವಿಧಾನಸೌಧವನ್ನು ಸರ್ಕಾರದವರು ಪೋಲೀಸರ ವಶಕ್ಕೆ ಕೊಟ್ಟಿದ್ದಾರೆ. ಯಾವ ರಾಜ್ಯದಲ್ಲೂ ಕೂಡ ಈ ರೀತಿ ನಾನು ನೋಡಲಿಲ್ಲ. ನಮ್ಮ ಸದನ ಇವತ್ತು ಬೇರೆ ಜಾಗದಲ್ಲಿ ಇದ್ದಿದ್ದರೆ. ಪಾರ್ಲಿಮೆಂಟ್ ಹೌಸ್ ತರಹ ಸ್ವತಂತ್ರವಾದ ಕಟ್ಟಡ ಇದ್ದಿದ್ದರೆ ಪೋಲೀಸರಿಗೆ ಬರುವುದಕ್ಕೆ ಅಧಿಕಾರ ಇರುತ್ತಿರಲಿಲ್ಲ ತಮ್ಮ (ಮಾನ್ಯ ಅಧ್ಯಕ್ಷರ) ಕಕ್ಷೆಯಲ್ಲಿ ಬರುತ್ತಿತ್ತು. ಈ ಸದನಕ್ಕೆ ಬರತಕ್ಕ ಸಾರ್ವಜನಿಕರನ್ನು ಶಾಸಕರನ್ನು ತಡೆಯತಕ್ಕ ಹಕ್ಕು ಸರ್ಕಾರಕ್ಕಿಲ್ಲ. ಪೋಲೀಸ್ ಆಕ್ಟ್ ೩೫ ಅನ್ವಯವಾಗುವುದಿಲ್ಲ ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ತಮ್ಮ ಅಧಿಕಾರ.....

MR. DEPUTY SPEAKER.—But that is outside the premises. They have got every right.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸದನ ವಿಧಾನಸೌಧದಲ್ಲೇ ಇರುವುದರಿಂದ ಈ ಪ್ರಶ್ನೆ ಬರುತ್ತದೆ. ಶಾಸಕಾಂಗಕ್ಕೇ ಒಂದು ಸ್ವತಂತ್ರವಾದ ಕಟ್ಟಡ ಇದ್ದಿದ್ದರೆ ಇವರಿಗೆ ಏನೂ ಅಧಿಕಾರ ಇರುತ್ತಿರಲಿಲ್ಲ, ಇವತ್ತು ತೊಂದರೆಯಾಗಿರುವುದು ಶಾಸಕಾಂಗ ನಮ್ಮ ಸೆಕ್ರೆಟೇರಿಯಟ್‌ನಲ್ಲೇ ಇರುವುದರಿಂದ ನಮ್ಮ ಪ್ರೆಮಿಸಸ್ ಯಾವುದು ಎಂದು ಡಿಫೈನ್ ಆಗಿಲ್ಲ. ಇವತ್ತು ಮೂಲಭೂತವಾದ ಪ್ರಶ್ನೆಯನ್ನು ಹೇಳುತ್ತಿದ್ದೇನೆ. ಶಾಸನಸಭೆಗೆ ಬರತಕ್ಕ ಶಾಸಕರು ೫ ಜನಕ್ಕಿಂತ ಹೆಚ್ಚು ಕೂಡಿ ಬಂದರೆ ಇವರ ಹೇಳಿಕೆ ಪ್ರಕಾರ ಅಪರಾಧವಾಗುತ್ತದೆ, ನಾವು ಜೈಲಿಗೆ ಹೋಗಬೇಕಾಗುತ್ತದೆ. ಇಷ್ಟು ಕ್ರೂರವಾದ ಕಾನೂನನ್ನು ಜಾರಿ ಮಾಡುತ್ತಿದ್ದಾರೆ. ಇವತ್ತು ಶಾಸಕರ ಭವನದಿಂದ ನಾವು ಶಾಸಕರು ೫ ಜನರಿಗಿಂತ ಹೆಚ್ಚಾಗಿ ಅಂದರೆ ೬ ಜನ ಕೂಡಿ ಬಂದರೆ ನಮ್ಮನ್ನು ಅರೆಸ್ಟ್ ಮಾಡಬಹುದು ಕಾನೂನು ಪ್ರಕಾರ. ಕಾನೂನು ಹೀಗಿದೆ, ೫ ಜನರಿಗಿಂತ ಹೆಚ್ಚು ಶಾಸಕರು ಸೇರದಂತೆ ಇವರು ಕಾನೂನು ಮಾಡಿದ್ದಾರೆ. ಎರಡನೆಯದಾಗಿ ಸಾರ್ವಜನಿಕರು ತಮ್ಮ (ಅಧ್ಯಕ್ಷರ) ಅಪ್ಪಣೆ ಪಡೆದು ಗ್ಯಾಲರಿಗೆ ಬರತಕ್ಕ ಅಧಿಕಾರ ಇದೆ. ೫ಕ್ಕಿಂತ ಹೆಚ್ಚು ಜನ ಬಂದು ಇಲ್ಲಿ ನಿಲ್ಲುತ್ತಾರೆ, ನೂರಾರು ಜನರು ಕ್ಯೂ ನಿಲ್ಲುತ್ತಾರೆ. ಅದೂ ಅಪರಾಧ ಮೆರವಣಿಗೆಯಲ್ಲಿ ಹೋಗಿ ಮೆಮೋರ್ಯಾಂಡಮ್ ಕೊಟ್ಟು ಎಲ್ಲಾ ಮುಗಿದ ಮೇಲೆ ಸಭೆಯ ಕಾರ್ಯಕಲಾಪಗಳನ್ನು ನೋಡುವುದಕ್ಕೆ ಅವರು ಬರುತ್ತಿದ್ದರು. ಅದು ಸಾರ್ವಜನಿಕರ ಹಕ್ಕು ಇಂಥ ಒಂದು ತಿಳುವಳಿಕೆಯನ್ನು ಶಾಸಕಿಯಾದಂಥ ಶ್ರೀಮತಿ ಅನಸೂಯ ಗಜಾನನ ಶರ್ಮ ಅವರು ಕೊಟ್ಟ ಮೇಲೂ ಪೋಲೀಸರು ಸೆಕ್ಷನ್ ೩೫ನ್ನು ಅನ್ವಯ ಮಾಡಿ ಅರೆಸ್ಟ್ ಮಾಡತಕ್ಕ ಹೀನವಾದ ಕೃತ್ಯ ಮಾಡಿರುವುದು ಸರಿಯೇ ? ಮೆರವಣಿಗೆ ಮಾಡುವುದಕ್ಕೆ ಅಥವಾ ದಂಗೆ ಮಾಡುವುದಕ್ಕೆ ಬರುತ್ತಿದ್ದರೆ ಅದು ಬೇರೆ ವಿಷಯ. ಆದರೆ ವಿಧಾನಪರಿಷತ್ತಿನ ಗ್ಯಾಲರಿಗೆ ಹೋಗುತ್ತಿದ್ದೇವೆ ಎಂದು ಹೇಳಿದರೂ, ಶಾಸಕರ ಮಾತಿಗೂ ಬೆಲೆ ಕೊಡದೆ ಹೀಗೆ ಮಾಡಿದ್ದು ಸರಿಯೇ ? ಎಲ್ಲಾ ಅರಿತುಕೊಂಡು ಕಾನೂನನ್ನು

ಜಾರಿ ಮಾಡದೇ ಇರತಕ್ಕ ಬುದ್ಧಿ ಈ ಸರ್ಕಾರಿ ಅಧಿಕಾರಿಗಳಿಗೆ ಇಲ್ಲ ಎಂದರೆ ಅದಕ್ಕೇನು ಹೇಳಬೇಕು ? ಮಹಿಳೆಯರು ಹೇಳುತ್ತಿದ್ದರೂ ತಿಳಿದುಕೊಳ್ಳುವಷ್ಟು ತಿಳುವಳಿಕೆ ಇವರಿಗಿಲ್ಲವೇ ? ಇಷ್ಟೊಂದು ಕೆಳ ಮಟ್ಟಕ್ಕೆ ಪೋಲೀಸ್ ಇಲಾಖೆ ಮತ್ತು ಸರ್ಕಾರ ಹೋಗಿದೆಯೇ ಎಂದು ಕೇಳುತ್ತಿದ್ದೇನೆ. ಮಾನವಂತ ಮಹಿಳೆಯರು ಒಬ್ಬ ಮಹಿಳೆಯ ಮಾನಾಪಹರಣ ಮಾಡಿದ ಮಂತ್ರಿಗಳ ಬಗ್ಗೆ ಮೆಮೋರಾಂಡಮ್ ತಯಾರು ಮಾಡಿಕೊಂಡು ರಾಜ್ಯಪಾಲರಿಗೆ ಕೊಟ್ಟು ಮೆರವಣಿಗೆ ಮಾಡಿ ತಮ್ಮ ಹಕ್ಕನ್ನು ಪ್ರತಿಷ್ಠಾಪನೆ ಮಾಡಿ ಶಾಂತವಾದ ಚಳುವಳಿ ಮಾಡಿ ಬರತಕ್ಕ ನಾಗರೀಕರನ್ನು ಬಂಧನ ಮಾಡತಕ್ಕ ಈ ಸರ್ಕಾರಕ್ಕೆ ನಾವು ಏನೆಂದು ಕರೆಯಬೇಕು ? ಮಾನ ಇದೆಯೇ, ಮರ್ಯಾದೆ ಇದೆಯೇ, ನಾಚಿಕೆ ಇದೆಯೆ ? ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ನಾವು ಸಭೆಯಿಂದ ಪ್ರತಿಭಟನೆ ಮಾಡತಕ್ಕ ಪರಿಸ್ಥಿತಿ ಬರುತ್ತದೆ. ೩೫ ಜನ ಮಹಿಳೆಯರನ್ನು ಬಂಧನ ಮಾಡಿ ಕೂರಿಸಿದ್ದಾರೆ. ಮಾನ್ಯ ಮಂತ್ರಿಗಳ ಸಹೋದರಿಯಾಗಿರಬಹುದು, ನನ್ನ ಸಹೋದರಿಯಾಗಿರಬಹುದು. ಈ ರೀತಿ ಪೋಲೀಸರ ದೌರ್ಜನ್ಯಕ್ಕೆ ಒಳಗಾಗಿ ಪೋಲೀಸ್ ಸ್ಟೇಷನ್ನಿಗೆ ಹೋಗಿದ್ದರೆ ತಾವು ಏನೆಲ್ಲಾ ಮಾಡುತ್ತಿದ್ದಿರಿ ಸ್ವಾಮಿ ? ಇದರ ಬಗ್ಗೆ ಸರ್ಕಾರದವರು ಏನೂ ಹೇಳಲಿಲ್ಲ.

MR. DEPUTY SPEAKER.—As per the information available now, they have committed an offence, Therefore they have been arrested

ಶ್ರೀಮತಿ ಅನಸೂಯ ಗಜಾನನ ಶರ್ಮ.—ಗ್ಯಾಲರಿಗೆ ಬರುತ್ತಿದ್ದರೆ ಅವರು ಅಪರಾಧ ಮಾಡಿದ್ದಾರೆ ಎಂದು ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರ ಬಗ್ಗೆ ಏನಾಗಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ವಿಧಾನಸೌಧದಲ್ಲಿ ಮತ್ತು ಹೊರಗಡೆ ಪೋಲೀಸರನ್ನು ನಿಲ್ಲಿಸಿ ಬಹಳ ತೊಂದರೆ ಮಾಡುತ್ತಿದ್ದಾರೆಂದೂ ಪೋಲೀಸ್ ರಾಜ್ಯ ಆಗಿದೆಯೆಂದೂ ಮಾನ್ಯ ಸದಸ್ಯರು ಹೇಳಿದರು. ಗೋಪಾಲಗೌಡ ಸರ್ಕಲ್‌ನಿಂದ ಕಾಫಿಬೋರ್ಡ್ ತನಕ ಮೆರವಣಿಗೆ ಮಾಡಬಾರದು ಅದು ಪ್ರೊಹಿಬಿಟೆಡ್ ಏರಿಯಾ ಎಂದು ೩-೭-೧೯೭೯ರಲ್ಲಿ ಹಿಂದಿನ ಸರ್ಕಾರವೇ ಆಜ್ಞೆ ಹೊರಡಿಸಿದೆ, ಅದು ನಾವು ಮಾಡಿದ್ದಲ್ಲ. ನಾವು ಮಾಡಿ ಹೊಸದಾದ ರಾಜ್ಯ ಸ್ಥಾಪನೆ ಮಾಡುವುದಕ್ಕೆ ನಾವೇನೂ ಹೊರಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸರ್ಕಾರ ಮತ್ತು ಹಿಂದಿನ ಸರ್ಕಾರ ಎರಡೂ ಒಂದೆ ಪಕ್ಷದ ಸರ್ಕಾರ ನಮಗೆ ಇದರಲ್ಲೇನೂ ಅಂತರವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾಜಿ ಮುಖ್ಯಮಂತ್ರಿಗಳು, ಶ್ರೀ ಮೈಕೇಲ್ ಫರ್ನಾಂಡಿಸ್ ಅವರು ಯಾರ ಬೆನ್ನಹಿಂದೆ ಇದ್ದಾರೋ ಅವರು ಇದ್ದಾಗ ಆಗಿದ್ದು...

(ಗೊಂದಲ)

MR. DEPUTY SPEAKER. —There has been a breach of rules.

SRI M V. RAJASEKHARAN.—Law is there. You have the voa discretion.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನೇನೂ ಹೊಸದಾಗಿ ಮಾಡಿಲ್ಲ. ೧೯೭೯ರಲ್ಲಿ ಅದನ್ನು ಪ್ರೊಹಿಬಿಟೆಡ್ ಏರಿಯಾ ಎಂದು ಸರ್ಕಾರ ನೋಟಿಫೈ ಮಾಡಿದೆ. ಮೆರವಣಿಗೆಯನ್ನು.....

SRI MICHAEL B. FERNANDES.—Throw it out.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಹಾಗಾದರೆ ಗ್ಯಾಲರಿಗೆ ಜನರನ್ನು ಬಂದ್ ಮಾಡಿ. ಏತಕ್ಕೆ ಬಿಡುತ್ತಿದ್ದೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಭಯದ ವಾತಾವರಣ ಏನೂ ನಿರ್ಮಾಣವಾಗಿಲ್ಲ ವಿಧಾನ ಸಭೆಯಿಂದ ಸದಸ್ಯರು ಬರುವಾಗ ತಡೆಹಿಡಿಯುವ ಪ್ರಸಂಗ ಏನೂ ನಡೆದಿಲ್ಲ. ಈ ಸದನದಲ್ಲಾಗಲೀ ಆ ಸದನದಲ್ಲಾಗಲೀ ಪ್ರೇಕ್ಷಕರ ಗ್ಯಾಲರಿ ತುಂಬಿರುತ್ತದೆ. ಜನರಿಗೆ ಭಯ ಹುಟ್ಟಿಸಿದ್ದೇ ಆದರೆ, ಅವರಿಗೆ ಬರಬಾರದು ಎಂದು ಹೇಳಿದ್ದರೆ, ಅವರ ಹಕ್ಕುಗಳನ್ನು ಮೊಟಕು ಗೊಳಿಸಿದ್ದರೆ ಇಷ್ಟೊಂದು

ಜನ ಸಭೆಗೆ ಬರುತ್ತಿರಲಿಲ್ಲ. ಈ ಮನೆಯಲ್ಲಾಗಲೀ ಆ ಮನೆಯಲ್ಲಾಗಲೀ ಜನ ನಿರ್ಭೀತಿಯಿಂದ ಬರುತ್ತಿದ್ದಾರೆ. ಸದನದ ಕಾರ್ಯಕಲಾಪಗಳನ್ನು ವೀಕ್ಷಿಸುತ್ತಿದ್ದಾರೆ. ಇವತ್ತು ಮಾನ್ಯ ಸದಸ್ಯೆಯವರು ರಾಜಭವನಕ್ಕೆ ಹೋಗಿ ರಾಜ್ಯಪಾಲರಿಗೆ ಮೆಮೊರಾಂಡಂ ಕೊಡುವುದಕ್ಕೆ ಸರ್ಕಾರವಾಗಲೀ ಪೋಲೀಸರಾಗಲೀ ಅಡ್ಡಿಪಡಿಸಿಲ್ಲ. ರಾಜ್ಯಪಾಲರ ಬಳಿಗೆ ಹೋಗಿ ತಮ್ಮ ಪ್ರಜಾಪ್ರಭುತ್ವದ ಹಕ್ಕನ್ನು ಚಲಾಯಿಸಿದ್ದಾರೆ. ಅಲ್ಲಿಯವರೆಗೆ ಯಾವ ತೊಂದರೆಯು ಇರಲಿಲ್ಲ. ಕೊಟ್ಟು ಬಂದ ಮೇಲೆ, ನಿಷೇಧಿಸಲ್ಪಟ್ಟ ಪ್ರದೇಶದಲ್ಲಿ ಮೆರವಣಿಗೆ ಮಾಡಬಾರದೆಂದು ಗೊತ್ತಿದರೂ ಕೂಡ ಅವರು.....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಅರ್ಥ ಮಾಡಿಕೊಳ್ಳಬಲ್ಲೆ. ಪ್ರಶ್ನೆ ಇಷ್ಟೆ. ಅವರ ದೃಷ್ಟಿಯಲ್ಲಿ ಇದು ಮೆರವಣಿಗೆಯಲ್ಲ. ಆದರೆ, ಕಾನೂನು ದೃಷ್ಟಿಯಲ್ಲಿ ಇದು ಮೆರವಣಿಗೆ.

(ಗೊಂದಲ)

SRI MICHAEL B. FERNANDES.—You must explain what is procession. (INTERRUPTION) He has misled the House. This is a very irregular statement.

MR. DEPUTY SPEAKER.—Please resume your seats. Hon Minister has not yielded.

SRI MICHAEL B. FERNANDES.—This precludes us from bringing our friends in group for attending the session from tomorrow.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಮುಗಿಸುವುದಕ್ಕೆ ಅವಕಾಶ ಕೊಡಿ. ವಾದ ಇಷ್ಟೇ : ವಿರೋಧ ಪಕ್ಷದವರು ಇದನ್ನು ಮೆರವಣಿಗೆ ಅಲ್ಲವೆಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀಮತಿ ಅನಸೂಯ ಗಜಾನನ ಶರ್ಮ.—ಇಲ್ಲ, ಸ್ವಾಮಿ .....

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದು ನಿಮಿಷ. We say that according to the Police it is a procession. According to hon. member,s it is not a procession. Assuming that it is a procession, the Police have arrested. This is a matter which will definitely look into and members need not create a furore over this matter. We are here to look into that. This is a question of just assumption and it is also an argument. It will be definitely looked into.

(INTERRUPTION)

ಶ್ರೀ ಎಸ್. ಆರ್. ಬೊಮ್ಮಾಯಿ.—ಬಂಧಿಸಿ ಪೋಲಿಸ್ ಠಾಣೆಯಲ್ಲಿಟ್ಟಿರುವ ಮಹಿಳೆಯರ ಬಗ್ಗೆ ಸರ್ಕಾರದ ಕ್ರಮವೇನು ಎನ್ನುವುದು ನಮಗೆ ಗೊತ್ತಾಗಬೇಕು. ಇದರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯವರು ಒಳಗಾಗಿದ್ದಾರೆ ; ವಿರೋಧ ಪಕ್ಷಗಳ ಅನೇಕ ಮಹಿಳಾ ಮುಖಂಡರುಗಳು ಮತ್ತು ಸಮಾಜ ಸೇವಕಿಯರೂ ಇದ್ದಾರೆ. ಆದುದರಿಂದ, ಅವರ ಬಗ್ಗೆ ಸರ್ಕಾರದ ಕ್ರಮವೇನೆನ್ನುವುದು ನಮಗೆ ಗೊತ್ತಾಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಪೋಲಿಸ್ ಸ್ಟೇಷನ್‌ನಲ್ಲಿ ಅವರ ಪಕ್ಷದ ಕಾರ್ಯಕರ್ತೆ ಯಾರು ..... ಇದ್ದಾರೆ ..... ಅದರ ಬಗ್ಗೆ, after six O'clock we will submit to the House.

(ಗೊಂದಲ)

ಶ್ರೀ ಹೆಚ್. ರಾಂದೇವ್.—ಇವತ್ತು ರಾಜ್ಯದಲ್ಲಿ ಪೋಲಿಸ್ ನೀತಿ ಇಬ್ಬಗೆಯಾಗಿದೆ. ಆಡಳಿತ ಪಕ್ಷದವರು ಏನು ಮಾಡಿದರೂ ಅವರ ಹಿಂದೆ-ಮುಂದೆ ನಿಂತುಕೊಂಡು ಕುರಿಗಳಂತೆ ವರ್ತಿಸುತ್ತಾರೆ. ಆದರೆ, ವಿರೋಧ ಪಕ್ಷದವರನ್ನು ಕಂಡರೆ ಹುಲಿಗಳಂತೆ ವರ್ತಿಸುತ್ತಾರೆ. ಇಂದು ಒಬ್ಬರಿಗಾದದ್ದು ನಾಳೆ ಇನ್ನೊಬ್ಬರಿಗೂ ಆಗುತ್ತದೆ. ನಾಳೆ ಈ ಕಡೆಗೆ ನೀವು ಬಂದರೆ ನಿಮಗೂ ಇದೇ ಆಗುತ್ತದೆ. ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳು ದೊರೆಗಳೋ ಅಥವಾ ಪೋಲಿಸರು ದೊರೆಗಳೋ ಎಂದು ತೀರ್ಮಾನಕ್ಕೆ ಬರಬೇಕಾಗಿದೆ. ನಮಗೆ ಈ ಸರ್ಕಾರದಲ್ಲಿ ರಕ್ಷಣೆ ಸಿಗುತ್ತಿಲ್ಲ. ವಿರೋಧ ಪಕ್ಷದ ಸದಸ್ಯರು ತೊಂದರೆ ಗೀಡಾಗಂತ್ತಿದ್ದಾರೆ.

SRI M. V. RAJASEKHARAN.—We have to protest at the attitude of the Government.

MR. DEPUTY SPEAKER.—It is left to you. Hon. member Sri H. D. Deve Gowda may resume your speech.

ಶ್ರೀ ಎಸ್. ಆರ್. ಬೊಮ್ಮಾಯಿ —ದಸ್ತಗಿರಿ ಮಾಡಿರುವವರನ್ನು ಬಿಡುಗಡೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರೆನ್ನುವುದು ನಮಗೆ ತಿಳಿಯಬೇಕು. ಇಲ್ಲದಿದ್ದರೆ, ನಮಗೆ ಕಷ್ಟ ವಾಗುತ್ತದೆ.

MR. DEPUTY SPEAKER.—You can take up this subject tomorrow or the day after tomorrow. Mr. Deve Gowda, you can continue.

SRI H. D. DEVE GOWDA.—There is no need to take the subject tomorrow or the day after tomorrow. The Hon.Minister has made it clear that he would be making a statement at Six O'Clock. Let us wait.

MR. DEPUTY SPEAKER.—You can speak Mr. Deve Gowda.

SRI S. R. BOMMAI.—It is not the question of making statement. I want a categorical assurance from the Minister that they would be released.

MR. DEPUTY SPEAKER.—He has promised to make a statement at Six O'Clock.

SRI M. V. RAJASEKHARAN.— We are sorry that 20 innocent women have been kept in the Police Station and the Minister wants to make a statement after Six P.M.

MR. DEPUTY SPEAKER.—You cannot force the Minister to make a statement immediately.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಮಂತ್ರಿಗಳು ಮಾಹಿತಿಯನ್ನು ತರಿಸಿಕೊಳ್ಳಬೇಕು. ಸತ್ಯ ಸಂಗತಿ ಗೊತ್ತಾಗಬೇಕು. ಆರು ಗಂಟೆಗೆ ಹೇಳಿಕೆ ಕೊಡುವುದಾಗಿ ಮಾನ್ಯ ಸಚಿವರು ಹೇಳಿರುವುದರಿಂದ ಮುಂದಿನ ವಿಷಯಕ್ಕೆ ನಾವು ಹೋಗಬಹುದು.

ಶ್ರೀ ಎಂ. ವಿ. ರಾಜಶೇಖರನ್.—ನಾವು ಏನು ಹೇಳಿದರೂ ನಿಮ್ಮ ತಲೆ ಓಡುವುದಿಲ್ಲ ! ಮಾನ್ಯ ಸಚಿವರು ನೀತಿ ನಿಯಮಗಳ ಬಗ್ಗೆ ನಮಗೆ ಹೇಳುತ್ತಿದ್ದಾರೆ. ಈ ನೀತಿ ನಿಯಮಗಳನ್ನು ಒಂದು ಗಂಟೆ ಯಷ್ಟು ಕಾಲ ಪ್ರತಿ ದಿವಸ ಅವರ ಪಕ್ಷದ ಸದಸ್ಯರಿಗೆ ಹೇಳಲಿ. ಆಗ ಎಲ್ಲ ಸರಿಹೋಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಿಡುಗಡೆ ಮಾಡುವುದಕ್ಕೆ ಆಜ್ಞೆ ಹೊರಡಿಸುತ್ತೀರಾ ? ಇಲ್ಲದಿದ್ದರೆ ನಮಗೆ ಕಷ್ಟವಾಗುತ್ತದೆ.

SRI M. VEERAPPA MOILY.–Sir, the hon.members have submitted certain facts. They have also made a request that they must be immediately released. That is why I said that a Six O'Clock I will report back.

ಶ್ರೀ ಎಸ್. ಆರ್. ಬೊಮ್ಮಾಯಿ.–ಮಹಿಳೆಯರನ್ನು ಬಿಡುಗಡೆ ಮಾಡುವುದರ ಬಗ್ಗೆ ಸ್ಪಷ್ಟವಾದ ಭರವಸೆ ಕೊಟ್ಟರೆ ಸರಿ. ಇಲ್ಲದಿದ್ದರೆ, ನಮ್ಮ ರಾಜ್ಯದ ಪೋಲೀಸ್ ಠಾಣೆಗಳ ಇತಿಹಾಸ ನೋಡಿದರೆ, ಸಂಜೆ ಆರು ಗಂಟೆಯೊಳಗೆ ಅವರು ಏನಾಗುತ್ತಾರೋ ಗೊತ್ತಾಗುವುದಿಲ್ಲ. ನಮಗೆ ಪೋಲೀಸ್ ಠಾಣೆಗಳ ಬಗ್ಗೆ ಇದ್ದ ನಂಬಿಕೆ ಹೋಗಿದೆ. ಆದುದರಿಂದ, ಅವರನ್ನು ಬಿಡುಗಡೆ ಮಾಡುವುದಕ್ಕೆ ನಮಗೆ ಸ್ಪಷ್ಟ ಆಶ್ವಾಸನೆ ಕೊಟ್ಟರೆ...

MR. DEPUTY SPEAKER.—He has categorically assured that at Six O'Clock he will report back.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರನ್ನು ಈ ತಕ್ಷಣ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡದೆ ಹೋದರೆ ನಾವು ಕಾರ್ಯಕಲಾಪಗಳಲ್ಲಿ ಭಾಗವಹಿಸುವುದು ಕಷ್ಟವಾಗುತ್ತದೆ. ಇದು ಮಹಿಳೆಯರ ವಿಚಾರ. ಸರ್ಕಾರದ ನಿಲುವು ಸ್ಪಷ್ಟವಾಗದೆ ಹೋದರೆ ನಾವು ನಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡಬೇಕಾಗುತ್ತದೆ.

MR. DEPUTY SPEAKER.—Allow me to conduct the business of the House.

SRI M. V. RAJASHEKARAN.–This is the decade of development of women. The United Nations is celebrating and as a member of that organisation, India is also celebrating but in the State these innocent women have been put behind the bars in the Police Station, Can you not be atleast sensitive to this issue ? Ask your police to release then forthwith.

SRI M. CHANDRASEHKAR.—What offence they have committed ?

ಶ್ರೀಮತಿ ಅನುಸೂಯ ಗಜಾನನ ಶರ್ಮ.—ನಾವೇನೂ ರಸ್ತೆಯಲ್ಲಿ ಬರುತ್ತಿರಲಿಲ್ಲ. ಫುಟ್–ಪಾತ್ ಮೇಲೆ ಬರುತ್ತಿದ್ದೆವು. ರಾಜ್ಯಪಾಲರ ಕಛೇರಿಗೆ ಮೆರವಣಿಗೆ ಹೋಗಿ ಬರುತ್ತಿದ್ದೆವು. ನಾವೇನೂ ಅಪರಾಧ ಮಾಡಿಲ್ಲ.

MR. DEPUTY SPEAKER.–He will reply at Six O'Clock positively. The Chief Minister, who is in–charge of Home Portfolio is also not there.

ಶ್ರೀ ಪಿ. ರಾಂದೇವ್.—ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇವೆ. ಪೋಲೀಸ್ ಠಾಣೆಗಳಲ್ಲಿ ಹೆಂಗಸರನ್ನು ಏನು ಮಾಡುತ್ತಾರೋ ನಮಗೆ ಗೊತ್ತಿಲ್ಲ. ಪೋಲೀಸ್ ಠಾಣೆಗಳ ಬಗ್ಗೆ ನಮಗೆ ಅಪನಂಬಿಕೆ ಇದೆ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಉಪಾಧ್ಯಕ್ಷರೇ, ಮಹಿಳೆಯರನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ಯಾವುದೇ ರೀತಿಯ ಉತ್ತರ ಕೊಡುತ್ತಿಲ್ಲ. ಅವರನ್ನು ಜೈಲಿನಲ್ಲಿಟ್ಟು ಇಲ್ಲಿ ಕಾರ್ಯಕಲಾಪ ನಡೆಸುತ್ತಿರುವುದನ್ನು ನಾವು ಪ್ರತಿಭಟಿಸಿ ಸಭೆಯಿಂದ ನಿರ್ಗಮಿಸುತ್ತೇವೆ.

(ಜನತಾ ಪಕ್ಷದ ಸದಸ್ಯರು ಸಭೆಯಿಂದ ನಿರ್ಗಮಿಸಿದರು)

SRI M. VEERAPPA MOILY.–After all, it is a question of administration of justice. ಆದರೆ, ಅವರು ರಾಜಕೀಯ ಮಾಡಬೇಕೆಂದರೆ, we cannot help it. Why should we make politics about this issue ? How can we take a decision all of a sudden on this issue ?

SRI C. M. ARUMUGHAM.—Mr. Deputy Speaker Sir, I only appeal to the Government to consider the release of those 20 ladies in the Cubbon Park Police Station. As they have released two M. L. As, they can also release the other 20 ladies. Secondly I want to submit to you in the Police they consider that as procedure. Women were actually going to the Governor in the procession. After presenting the petition they were returning. That cannot be considered as a procession. After all these ladies may not know the consequence that this road is a prohibited area. They are not aware of it. When they went in a procession to present a petition. They were returning home. I only appeal to the Minister that they can be released.

SRI M. VEERAPPA MOILY.—I did not say, for a moment that we will not release them. What I said was that we will eonsider the release and I will report back at 6 O' Clock. But, witnin 15 minutes, definitely we will inform the House about the developments. It is not our pleasure to retain the lady members. When two Legislators leading a group of more than 36 persons we to come to the prohibited area, can we say that "No, no, it is not a procession, they are just coming casually". That is the point. We do understand the concern of Members. We will definitely within 15 minutes, report back to this House.

Financial Business

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜ ನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಅನೇಕ ಬೇಡಿಕೆಗಳನ್ನು ಒಪ್ಪಿಗೆಗಾಗಿ ಇಟ್ಟಿದ್ದಾರೆ. ಆದರೆ, ನಾನು ಎಲ್ಲಾ ಬೇಡಿಕೆಗಳ ಬಗ್ಗೆ ಮಾತನಾಡದೇ, ಅನೇ ಬೇಡಿಕೆಯಾದಂತ ರೇಷ್ಮೆ ವ್ಯವಸಾಯದ ಬಗ್ಗೆ ಮತ್ತು ರೇಷ್ಮೆ ಇಲಾಖೆಯ ಪ್ರಗತಿಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯ ಪ್ರಗತಿಯ ಬಗ್ಗೆ ಹೇಳುವುದಕ್ಕೆ ಮುಂಚೆ, ರೇಷ್ಮೆ ಬಾಬಿನ ಬಗ್ಗೆ ಮಾತನಾಡುವುದಕ್ಕೆ ಹೊರಟಾಗ, ಈ ವರ್ಷದಲ್ಲಿ ಒಂದು ಹೊಸ ವಿಷಯ ಈಗಾಗಲೆ ಸಭೆಯ ಗಮನಕ್ಕೆ ಬಂದಿದೆ, ಆದರೂ ನಾನೂ ಕರ್ತವ್ಯ ದೃಷ್ಟಿಯಿಂದ ಮತ್ತೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಡೀ ಭಾರತ ದೇಶದಲ್ಲಿ ಶೇಕಡ ೮೦ ರಷ್ಟು ರೇಷ್ಮೆ ಬೆಳೆಯನ್ನು ಬೆಳೆಯುತ್ತೇವೆಂದು ಹೇಳಿಕೊಳ್ಳುತ್ತಿದರೂ, ರೇಷ್ಮೆ ಉದ್ಯಮದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ರೇಷ್ಮೆ ಮಂಡಲಿ ಬೊಂಬಾಯಿನಲ್ಲಿ ತನ್ನ ಕೆಲಸವನ್ನು ಮಾಡುತ್ತಿತ್ತು. ಅದು ರಾಜ್ಯ ದಲ್ಲಿ ಇರಲಿಲ್ಲ. ೧೯೫೬ನೇ ಇಸವಿಯಲ್ಲಿ. ಸ್ವಲ್ಪ ಕಾಲ ನಮ್ಮ ರಾಜ್ಯದಲ್ಲಿತ್ತು. ಆಗಿನ ಸನ್ನಿವೇಶದಲ್ಲಿ ಟೆಕ್ಸ್‌ಟೈಲ್ ಕಮೀಷನರ್‌ರವರು ಮಂಡಲಿಯ ಅಧ್ಯಕ್ಷರಾಗಿದ್ದರಿಂದ, ಟೆಕ್ಸ್‌ಟೈಲ್ ಕಮೀಷನರ್‌ರವರ ಕಛೇರಿ ಬೊಂಬಾಯಿನಲ್ಲಿದ್ದುದರಿಂದ. ಈ ಮಂಡಲಿಯನ್ನು ಬೊಂಬಾಯಿನಲ್ಲಿಯೇ ಇಟ್ಟುಕೊಳ್ಳ ಲಾಗಿತ್ತು. ಈ ಮಂಡಲಿಯನ್ನು ನಮ್ಮ ರಾಜ್ಯಕ್ಕೆ ಪಡೆಯಂವ ಸಲುವಾಗಿ ಹಿಂದಿನ ಸರ್ಕಾರಗಳು ಸತತ ವಾಗಿ ಪ್ರಯತ್ನ ಮಾಡಿದವು, ನಾನು ಕೇಂದ್ರ ರೇಷ್ಮೆ ಮಂಡಲಿ ಸದಸ್ಯನಾಗಿ ನಿರ್ಣಗಳನ್ನು ತಂದರೂ ಕೂಡ, ಮತ್ತು ರೇಷ್ಮೆ ಸಮ್ಮೇಳಗಳನ್ನು ಮಾಡಿ ಪಾರ್ಥನೆ ಮಾಡಿದರೂ ಕೂಡ ಇಲ್ಲಿಯತನಕ ಆ ಮಂಡಲಿ ಯನ್ನು ಪಡೆಯಲಿಕ್ಕೆ ಆಗಿರಲಿಲ್ಲ. ಇವತ್ತು ಸಂತೋಷಪಡಬೇಕಾದ ಸಂಗತಿ, ಇವತ್ತು ನಮ್ಮ ರಾಜ್ಯ ಸರ್ಕಾರ ಹಾಗೂ ಮುಖ್ಯವಾಗಿ ನಮ್ಮ ಮುಖ್ಯಮಂತ್ರಿಗಳು ತಮ್ಮ ಪ್ರಭಾವವನ್ನು ಬೀರಿ, ಒತ್ತಾಯಿ ತಂದು ರೇಷ್ಮೆ ಮಂಡಲಿಯನ್ನು ಕರ್ನಾಟಕಕ್ಕೆ ವರ್ಗ ಮಾಡುವ ಕೆಲಸ ನಡೆದಿದೆಯೆಂದು ಹೇಳಿದರೆ ತಪ್ಪಾಗಲಾರದು. ನನಗೆ ತಿಳಿದ ಪ್ರಕಾರವಾಗಿ ಪ್ರಧಾನ ಮಂತ್ರಿಯವರಿಂದಲೇ ಆದೇಶ ಹೊರಟು,